## ಪ್ರಾರ್ಥನೆ

# ಮಹಾಲಕ್ಷ್ಮೀ ಸ್ತುತಿ - ೨

**ತ್ವತ್ತ್ಯಕ್ತಮೇತದಮಲೇ ಹರತೇ ಹರೋಽಪಿ**
**ತ್ವಂ ಪಾಸಿ ಹಂಸಿ ವಿದಧಾಸಿ ಪರಾವರಾಸಿ ।**
**ಈಡ್ಯೋ ಬಭೂವ ಹರಿರಪ್ಯಮಲೇ ತ್ವದಾಪ್ತ್ಯಾ**
**ಲಕ್ಷ್ಮಿ ಪ್ರಸೀದ ಸತತಂ ನಮತಾಂ ಶರಣ್ಯೇ ॥ ೪ ॥**

ನಿರ್ಮಲ ಸ್ವರೂಪೆಯಾದ ದೇವಿ, ನೀನು ಯಾರನ್ನು ತ್ಯಜಿಸಿರುವೆಯೋ, ಅವರನ್ನೇ ರುದ್ರನು ಸಂಹಾರ ಮಾಡುತ್ತಾನೆ. ನಿಜವಾಗಿ ಪಾಲನೆ, ಸಂಹಾರ ಹಾಗೂ ಸೃಷ್ಟಿ ಮಾಡುವವಳು ನೀನೇ ಆಗಿರುವೆ. ಸಮಸ್ತ ಜಗತ್ತೂ ನೀನೇ ಆಗಿರುವೆ. ನಿನ್ನನ್ನು ಪಡೆದು ಶ್ರೀಹರಿಯು ಎಲ್ಲರಿಂದಲೂ ಪೂಜಿಸಲ್ಪಟ್ಟನು. ನಿನ್ನಲ್ಲಿ ಶರಣಾಗತರಾಗಿ ನಮಿಸಿದವರನ್ನು ನೀನು ಪಾಲಿಸುವೆ. ನನ್ನಲ್ಲಿ ನೀನು ಸದಾ ಪ್ರಸನ್ನಳಾಗು!

**ಶೂರಃ ಸ ಏವ ಸ ಗುಣೀ ಸ ಬುಧಃ ಸ ಧನ್ಯೋ**
**ಮಾನ್ಯಃ ಸ ಏವ ಕುಲಶೀಲಕಲಾಕಲಾಪೈಃ ।**
**ಏಕಃ ಶುಚಿಃ ಸ ಹಿ ಪುಮಾನ್ ಸಕಲೇಽಪಿ ಲೋಕೇ**
**ಯತ್ರಾಪತೇತ್ತವ ಶುಭೇ ಕರುಣಾಕಟಾಕ್ಷಃ ॥ ೫ ॥**

ಶುಭಪ್ರದಳೆ, ಯಾರ ಮೇಲೆ ನಿನ್ನ ಕರುಣಾಪೂರ್ಣ ದೃಷ್ಟಿ ಬೀಳುವುದೋ ಅವರು ಲೋಕದಲ್ಲಿ ಶೂರ, ಗುಣಶಾಲಿ, ವಿದ್ವಾಂಸ, ಧನ್ಯ, ಮಾನ್ಯ, ಕುಲೀನ, ಶೀಲವಂತ, ಹಲವು ಬಗೆಯ ಕಲಾವಿದ - ಮುಂತಾದ ವಿಶೇಷ ಗುಣಗಳಿಂದ ಕೂಡಿ ಅತ್ಯಂತ ಪವಿತ್ರರೆನಿಸಿಕೊಳ್ಳುತ್ತಾರೆ.

**ಯಸ್ಮಿನ್ವಸೇಃ ಕ್ಷಣಮಹೋ ಪುರುಷೇ ಗಜೇಽಶ್ವೇ**
**ಸ್ತ್ರೈಣೇ ತೃಣೇ ಸರಸಿ ದೇವಕುಲೇ ಗೃಹೇಽನ್ನೇ ।**



**ರತ್ನೇ ಪತತ್ರಿಣಿ ಪಶೌ ಶಯನೇ ಧರಾಯಾಂ**
**ಸಶ್ರೀಕಮೇವ ಸಕಲೇ ತದಿಹಾಸ್ತಿ ನಾನ್ಯತ್ ॥ ೬ ॥**

ತಾಯಿ, ನೀನು ಯಾವ ಪುರುಷ, ಆನೆ, ಕುದುರೆ, ಸ್ತ್ರೀಯರು, ತೃಣ, ಸರೋವರ, ದೇವಾಲಯ, ಮನೆ, ಅನ್ನ, ರತ್ನ, ಪಶು-ಪಕ್ಷಿ ಇತ್ಯಾದಿಗಳಲ್ಲಿ ಪ್ರತಿಕ್ಷಣವೂ ನೆಲೆಸುವೆಯೋ ಅವು ಮಾತ್ರವೇ ಶೋಭಾಸಂಪನ್ನವಾಗಿರುತ್ತವೆ, ಬೇರೆ ಯಾವುವೂ ಅಲ್ಲ.

— ಸ್ಕಂದಪುರಾಣ

## ಸೂಕ್ತಿಪ್ರಭ

**ನ**ನ್ನ ಮುಂದಿರುವ ಸ್ತ್ರೀಪುರುಷರಿಗೆ ನಾನು ಹೇಳಬಯಸುವುದಿಷ್ಟೆ: ಎಂದಿಗೂ ಭರವಸೆ ಕಳೆದುಕೊಳ್ಳಬೇಡಿ, ಧೈರ್ಯಗೆಡಬೇಡಿ. ನಿಮ್ಮ ಮುಂದಿರುವ ಕಾರ್ಯವನ್ನು ಧೈರ್ಯವಾಗಿ ಹಾಗೂ ಶ್ರದ್ಧೆಯಿಂದ ನಿರ್ವಹಿಸಿದಾಗ ಮಾತ್ರ ಯಶಸ್ಸು ನಿಮ್ಮದಾಗುವುದು. — ಸಿ.ವಿ.ರಾಮನ್

**ಮ**ನಸ್ಸೇ ಎಲ್ಲವೂ ಆಗಿದೆ. ಶುದ್ಧ, ಅಶುದ್ಧ ಈ ಭಾವನೆಗಳೆಲ್ಲ ಮನಸ್ಸಿನಲ್ಲೇ ಇವೆ. ಮಾನವನು ಮೊದಲು ತನ್ನ ಮನಸ್ಸಿನಲ್ಲಿ ತಪ್ಪು ಮಾಡುತ್ತಾನೆ. ಬಳಿಕವೇ ಇತರರ ತಪ್ಪನ್ನು ಕಾಣುತ್ತಾನೆ. — ಶ್ರೀಮಾತೆ ಶಾರದಾದೇವಿ

**ಚಾ**ರಿತ್ರ್ಯವು ವೃಕ್ಷದ ಹಾಗೆ. ಪ್ರಸಿದ್ಧಿಯು ನೆರಳಿನ ಹಾಗೆ. ನಾವು ಪ್ರಸಿದ್ಧಿಯನ್ನು ಕುರಿತು ಆಲೋಚಿಸುತ್ತೇವೆ, ಆದರೆ ವೃಕ್ಷವೇ ವಾಸ್ತವವಾಗಿ ಇರುವ ವಸ್ತು.

— ಅಬ್ರಹಾಂ ಲಿಂಕನ್

**ಮೊ**ದಲಿಗೆ ನಿಮ್ಮ ಮನಸ್ಸಿನಲ್ಲಿ ಶಿಸ್ತು, ಸಮಭಾವ ಇವು ಇರಬೇಕು. ಅನಂತರ ಅದನ್ನು ನಿಮ್ಮ ಕುಟುಂಬದಲ್ಲಿ ಹರಡಬೇಕು. ಬಳಿಕ ಅದು ಸಮುದಾಯದಲ್ಲಿ ವ್ಯಾಪಿಸಬೇಕು; ಕೊನೆಗೆ ಅದು ಇಡೀ ರಾಷ್ಟ್ರವನ್ನು ವ್ಯಾಪಿಸಬೇಕು. ಆಗ ಮಾತ್ರ ನಿಮಗೆ ಶಾಂತಿ, ಸಾಮರಸ್ಯ ಲಭಿಸುವುದು. — ಕನ್‌ಫ್ಯೂಶಿಯಸ್

# SRI RAMAKRISHNA ADVAITA ASHRAMA

(A Branch of Ramakrishna Math, P.O. - Belur Math)
Ashrama Road, Kalady - 683 574, Dist. Ernakulam, Kerala
Email: kalady@rkmm.org    Ph: 0484-2462345



## ಆಶ್ರಮದ ಸುಸ್ಥಿರ ನಿರ್ವಹಣೆಗಾಗಿ ಆರ್ಥಿಕ ನೆರವು ನೀಡಲು ಭಕ್ತರಲ್ಲಿ ಹಾಗೂ ಹಿತೈಷಿಗಳಲ್ಲಿ ಮನವಿ

ಆದಿ ಶಂಕರಾಚಾರ್ಯರ ಜನ್ಮಸ್ಥಳವಾದ ಕೇರಳದ ಕಾಲಡಿಯಲ್ಲಿ 1936ರಲ್ಲಿ ಶ್ರೀರಾಮಕೃಷ್ಣ ಅದ್ವೈತ ಆಶ್ರಮವು ಸ್ಥಾಪನೆಗೊಂಡಿತು. ಸ್ವಾಮಿ ಬ್ರಹ್ಮಾನಂದರ ಶಿಷ್ಯರಾದ ಸ್ವಾಮಿ ಆಗಮಾನಂದರು ಈ ಆಶ್ರಮವನ್ನು ಆರಂಭಿಸಿದರು. 1942ರಲ್ಲಿ ಈ ಆಶ್ರಮವು ಬೇಲೂರು ಮಠದಲ್ಲಿರುವ ರಾಮಕೃಷ್ಣ ಮಹಾಸಂಘಕ್ಕೆ ಸೇರ್ಪಡೆಗೊಂಡಿತು.





ಈ ಆಶ್ರಮವು ಕೇರಳದಲ್ಲಿರುವ ಅತ್ಯಂತ ಹಳೆಯ ಆಧ್ಯಾತ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಸಮಾಜಸೇವಾ ಕೇಂದ್ರ ವಾಗಿದೆ. ಇಲ್ಲಿ ಕಿಂಡರ್ ಗಾರ್ಟನ್ ಹಂತ ದಿಂದ ಹಿಡಿದು +2 ವರೆಗಿನ ಶಾಲೆಗಳು (ಬ್ರಹ್ಮಾನಂದೋದಯಂ ಶಾಲೆಗಳು), ಬಾಲಕ ರಿಗಾಗಿ ಗುರುಕುಲಂ (ಹಾಸ್ಟೆಲ್), ಆರ್ಥಿಕ ವಾಗಿ ಹಿಂದುಳಿದ ವರ್ಗದವರಿಗಾಗಿ ಕಂಪ್ಯೂ ಟರ್ ಮತ್ತು ಟೈಪ್‌ರೈಟಿಂಗ್ ಕೇಂದ್ರಗಳಿವೆ. ಆಶ್ರಮವು ನೆರೆಹಾವಳಿ ಪರಿಹಾರ ಹಾಗೂ ಸಂತ್ರಸ್ತ ಪರಿಹಾರ ಕಾರ್ಯಗಳನ್ನು ನಡೆಸುತ್ತದೆ. ಇದಲ್ಲದೆ, ಗ್ರಾಮೀಣ ಹಾಗೂ ಇನ್ನಿತರ ಸೇವಾ ಕಾರ್ಯಗಳನ್ನೂ ಆಶ್ರಮವು ನಡೆಸುತ್ತಿದೆ. ಆಶ್ರಮದಲ್ಲಿ ಪೂಜೆ, ಪ್ರಾರ್ಥನೆ, ಆಧ್ಯಾತ್ಮಿಕ ಕಾರ್ಯಕ್ರಮಗಳು, ಆಧ್ಯಾತ್ಮಿಕ ಶಿಬಿರಗಳು, ಪ್ರವಚನ ಇತ್ಯಾದಿಗಳನ್ನು ನಡೆಸಲು ಶ್ರೀರಾಮಕೃಷ್ಣರ ಅಮೃತಶಿಲೆಯ ಪ್ರತಿಮೆಯಿಂದ ಕೂಡಿದ ದೇವಾಲಯ, ಸಭಾಂಗಣ, ಸಾರ್ವಜನಿಕ ಗ್ರಂಥಾಲಯ, ರಾಮಕೃಷ್ಣ-ವಿವೇಕಾನಂದ ಸಾಹಿತ್ಯ ಗ್ರಂಥಗಳನ್ನೊಳಗೊಂಡ ಪುಸ್ತಕ ಮಳಿಗೆಯಿದೆ. ಇತ್ತೀಚೆಗೆ ಸ್ಥಾಪಿಸಲಾದ ಸ್ವಾಮಿ ವಿವೇಕಾನಂದರ ಕಂಚಿನ ಪ್ರತಿಮೆಯನ್ನೊಳಗೊಂಡ ಪ್ರಶಾಂತವಾದ ಉದ್ಯಾನವನ ಕೂಡ ಆಶ್ರಮದ ಆವರಣದಲ್ಲಿದೆ.

ನಮ್ಮ ಈ ಉದಾತ್ತ ಹಾಗೂ ಪ್ರಮುಖ ಸೇವಾಕಾರ್ಯಗಳನ್ನು ಮುಂದುವರಿಸಲು, ಸುಸ್ಥಿರವಾಗಿ ನಿರ್ವಹಿಸಲು ಶಾಶ್ವತ ದತ್ತಿ ನಿಧಿ (Endowment Permanent Fund - EPF) ಮುಂತಾದ ಹಲವು ಯೋಜನೆಗಳಿಗಾಗಿ ಆರ್ಥಿಕ ನೆರವು ಅಗತ್ಯವಾಗಿದೆ. ವಾರ್ಷಿಕ ನಿರ್ವಹಣೆಗಾಗಿ ಶಾಶ್ವತ ನಿಧಿಯ ಬಡ್ಡಿಯ ಮೊತ್ತವನ್ನು ಬಳಸಲಾಗುವುದು. ಪ್ರತಿಯೊಂದು ಯೋಜನೆಗಾಗಿ ತಗಲುವ ಅಂದಾಜು ವೆಚ್ಚ ಹೀಗಿದೆ:

| ಕ್ರ .ಸಂ. | ಯೋಜನೆಗಳು | EPF ಮೊತ್ತ |
|---|---|---|
| 1 | ಬ್ರಹ್ಮಾನಂದೋದಯಂ ಶಾಲೆಗಳು | 1 ಕೋಟಿ |
| 2 | ಸ್ವಾಮಿ ವಿವೇಕಾನಂದ ಕಂಪ್ಯೂಟರ್ ಮತ್ತು ಟೈಪ್‌ರೈಟಿಂಗ್ ಸೆಂಟರ್ | 0.75 ಕೋಟಿ |
| 3 | ಶ್ರೀರಾಮಕೃಷ್ಣ ಗುರುಕುಲಂ (ಹಾಸ್ಟೆಲ್) | 1 ಕೋಟಿ |
| 4 | ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಮಂದಿರ ಮತ್ತು ಪೂಜಾಕಾರ್ಯ | 1 ಕೋಟಿ |
| 5 | ಆಶ್ರಮದ ಸಾಮಾನ್ಯ ನಿರ್ವಹಣೆ (ಸಂನ್ಯಾಸಿ ಜೀವನ ನಿರ್ವಹಣೆ) | 1 ಕೋಟಿ |
| | ಒಟ್ಟು | **4.75 ಕೋಟಿ** |

**ಭಕ್ತಜನರಲ್ಲಿ ಸಾರ್ವಜನಿಕರಲ್ಲಿ ಹಾಗೂ ಉದ್ದಿಮೆದಾರರಲ್ಲಿ ಈ ಉದಾತ್ತ ಯೋಜನೆಗೆ ಉದಾರ ಧನಸಹಾಯ ಮಾಡಬೇಕೆಂದು ನಾವು ವಿನಂತಿಸಿಕೊಳ್ಳುತ್ತಿದ್ದೇವೆ. ಈ ಮನವಿಯನ್ನು ತಾವೆಲ್ಲರೂ ಅತ್ಯಂತ ಕಾಳಜಿಯಿಂದ ಸ್ವೀಕರಿಸುವಿರೆಂದು ನಂಬಿದ್ದೇವೆ.**

ನೀವು ನೀಡುವ ದೇಣಿಗೆಯು ಆದಾಯ ತೆರಿಗೆ ಕಾಯಿದೆಯ **80G** ಅನ್ವಯ ತೆರಿಗೆ ವಿನಾಯಿತಿ ಪಡೆಯಲು ಅರ್ಹವಾಗಿರುತ್ತದೆ.

* ಚೆಕ್/ಡಿ.ಡಿ. ಮೂಲಕ (''**Sri Ramakrishna Advaita Ashrama**'' ಹೆಸರಿನಲ್ಲಿ) ಯಾವ ಉದ್ದೇಶಕ್ಕಾಗಿ ದೇಣಿಗೆ ಇತ್ಯಾದಿ ವಿವರಗಳಿರುವ ಪತ್ರದೊಂದಿಗೆ ಕಳುಹಿಸಬಹುದು.

*ಅಥವಾ, ಇಲೆಕ್ಟ್ರಾನಿಕ್ ಮೂಲಕ RTGS/NERT ವರ್ಗಾವಣೆ ಮಾಡಬಹುದು : 1) **A/c No. 10367019646, State Bank of India, Kalady (IFSC: SBIN0070717).** *(PAN & ಆಧಾರ್ ಸಂಖ್ಯೆ ನೀಡಬೇಕು).*

ಅಥವಾ 2) ಇಲ್ಲಿ ನೀಡಿದ **QR code** ಬಳಸಿ ಪಾವತಿಸಬಹುದು. **Our Merchant Name: SREE RAMAKRISHNA ADVAITA, UPI ID : rkmkalady@sbi**

ರೂ.10,000 ಕ್ಕಿಂತ ಹೆಚ್ಚಿನ ಮೊತ್ತವಾಗಿದ್ದಲ್ಲಿ **PAN** ಸಂಖ್ಯೆಯನ್ನು ದಯವಿಟ್ಟು ನೀಡಬೇಕು.

ಕಳುಹಿಸಿದ ಬಳಿಕ kalady@rkmm.org ಈ ವಿಳಾಸಕ್ಕೆ ಇ-ಮೇಲ್ ಮೂಲಕ ತಮ್ಮ ಹೆಸರು, ಪೂರ್ಣ ವಿಳಾಸ, ಫೋನ್ ಸಂಖ್ಯೆ ಹಾಗೂ ಪಾವತಿ ವಿವರಗಳನ್ನು ತಿಳಿಸಬೇಕು.

ಭಗವತ್ಸೇವೆಯಲ್ಲಿ ತಮ್ಮ,
**ಸ್ವಾಮಿ ಶ್ರೀವಿದ್ಯಾನಂದ**
ಅಧ್ಯಕ್ಷರು



# ‘ಮನೆ’ಯೆಂಬ ಸುಮಧುರ ತಾಣ

## ‘ಮನೆ!’

— ಇದೆಂಥ ಕಲ್ಪನಾ ತರಂಗಗಳನ್ನು ಹೊರಹೊಮ್ಮಿಸುತ್ತದೆ!

ಭೌತಿಕವಾಗಿಯೂ, ಕಾಲ್ಪನಿಕವಾಗಿಯೂ, ಭಾವನಾತ್ಮಕವಾಗಿಯೂ ಮನೆಯೆಂಬುದು ಎಲ್ಲರ ಹೃದಯಕ್ಕೆ ಹತ್ತಿರವಾದದ್ದು. ಅದರಲ್ಲೂ, ಊರು ಬಿಟ್ಟು ಕಾರ್ಯಾರ್ಥವಾಗಿ ಪರ ಊರಿಗೆ, ಪರದೇಶಕ್ಕೆ ಹೋದವರಿಗಂತೂ, ‘ಮನೆಗೆ ಮರಳುವುದು’ ಎಂದರೆ ಅದೆಂಥ ಒಲವು! ಎಂಥ ನಲಿವು! ದೈನಂದಿನ ಬದುಕಿನಲ್ಲೂ ಅಷ್ಟೆ. ಕೆಲಸಕ್ಕಾಗಿ ಹೊರಗಡೆ ಹೋದವನು, ಬೆವರು ಸುರಿಸಿ ದುಡಿದು, ಬಳಲಿ ಬೆಂಡಾಗಿ ಮನೆಗೆ ಮರಳಿ, ಮೈಚಾಚಿ ಮಲಗಿದನೆಂದರೆ ಅದೆಂಥ ವಿಶ್ರಾಂತಿ! ಈ ‘ಮನೆ’ ಯೆಂಬುದು ನಮ್ಮ ಜನಜೀವನದಲ್ಲಿ ಅದೆಷ್ಟು ಭಾವುಕ ಸನ್ನಿವೇಶಗಳನ್ನು ಸೃಷ್ಟಿಸುತ್ತದೆ ಎಂದು ಚಿಂತಿಸಿದಾಗ ಆಶ್ಚರ್ಯವೆನಿಸುತ್ತದೆ. ಮನೆ ಕಟ್ಟಿಸುವುದು, ಮನೆ ಒಕ್ಕಲು (ಗೃಹಪ್ರವೇಶ), ಮನೆ ಬೆಳಗುವುದು, ಮನೆಯಿಂದ ಹೊರಹಾಕುವುದು, ಮನೆ ಒಡೆಯುವುದು, ಮನೆ ಬಿಟ್ಟು ಹೋಗುವುದು, ಮನೆಗೆ ಮರಳುವುದು – ಹೀಗೆ ನಮ್ಮ ನುಡಿಗಟ್ಟುಗಳಲ್ಲೇ ಹತ್ತು ಹಲವು ಸನ್ನಿವೇಶಗಳನ್ನು ಸೃಷ್ಟಿಸಿ ಕೊಡುವ ಪರಂಪರೆ ಬೆಳೆದುಬಂದಿದೆ. ಆಧ್ಯಾತ್ಮಿಕವಾಗಿಯೂ ಸಾಧಕನು ತನ್ನ ನಿಜದ ನೆಲೆಯನ್ನು ಗುರುತಿಸುವ ಸಂದರ್ಭಗಳಲ್ಲಿ ‘ಅಲ್ಲಿದೆ ನಮ್ಮನೆ, ಇಲ್ಲಿ ಬಂದೆ ಸುಮ್ಮನೆ’ ಎಂದೋ, ‘ನಡೆ ನೀ ಮನವೆ ನಿಜದಾಲಯಕೆ’ ಎಂದು, ಅಥವಾ ಬಸವಣ್ಣನವರು ಹೇಳಿದಂತೆ ‘ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ’ – ಎಂಬಂತಹ ಉದ್ಗಾರಗಳು ಏಳುತ್ತವೆ.

## ಮನೆ : ಕಲ್ಪನೆಯ ಉಗಮ

ಮನುಕುಲದ ಚರಿತ್ರೆಯನ್ನು ಗಮನಿಸಿದಾಗ ಮಾನವನು ಹೇಗೆ ಮನೆಯನ್ನು ನಿರ್ಮಿಸಿ ಜೀವಿಸಲು ಕಲಿತ – ಎಂಬ ವಿಚಾರ ಅಚ್ಚರಿಯನ್ನು ಮೂಡಿಸುತ್ತದೆ. ಹಿಂದೆ, ಬಹಳ ಹಿಂದೆ, ಮಾನವನಿನ್ನೂ ಪ್ರಾಣಿಗಿಂತ ಏನೂ ಮೇಲಲ್ಲ ಎಂಬಂತಿದ್ದಾಗ, ಬಹುಶಃ ಗುಹೆಗಳಲ್ಲೋ, ದಟ್ಟ ಅರಣ್ಯದ ನಡುವಿನಲ್ಲೋ ಗುಂಪಾಗಿ ಜೀವಿಸುತ್ತಿದ್ದಿರಬೇಕು. ಪ್ರಾಕೃತಿಕ ವಿದ್ಯಮಾನಗಳಾದ ಮಳೆ, ಬಿಸಿಲು, ಗುಡುಗು-ಸಿಡಿಲು, ಅಥವಾ ಬಿರು ಗಾಳಿ, ಕಾಡ್ಗಿಚ್ಚು ಮುಂತಾದ ವಿಕೋಪಗಳಿಂದ ಸಹಜವಾಗಿಯೇ ಮಾನವನು ಭಯಭೀತನಾಗಿದ್ದ; ಕ್ರಮೇಣ ಅವನ ಬುದ್ಧಿಯ ವಿಕಾಸವಾದಂತೆ ಅವನು ಜೀವನದ ಚಟುವಟಿಕೆಗಳಲ್ಲಿ ವಿವಿಧ ಉಪಕರಣಗಳನ್ನು ಬಳಸಲು ಕಲಿತ. ಅದರ ಒಂದು ಪರಿಣಾಮ ಗುಡಿಸಿಲು, ಕುಟೀರ, ಮನೆಯ ನಿರ್ಮಾಣ. ಇಂದಿಗೂ ಆದಿವಾಸಿ ಜನಾಂಗಗಳಲ್ಲಿ ಪ್ರಾಚೀನ ಜೀವನಕ್ರಮದಂತೆ ತೀರ ಪ್ರಾಥಮಿಕ ಹಂತದ ಗುಡಿಸಿಲುಗಳನ್ನು ಕಾಣಬಹುದು. ಸುರಕ್ಷಿತವಾಗಿ ಒಂದೆಡೆ ನೆಲೆಸುವುದು, ಎಲ್ಲರೂ ಒಂದೆಡೆ ನಿದ್ರಿಸುವುದು – ಇದು ಮನೆಯ ಕಲ್ಪನೆ ಮೂಡಿಬರಲು ಕಾರಣವಾಯಿತು; ಆದ್ದರಿಂದ ‘ವಸತಿ’ ಎಂಬುದು ಮಾನವನ ಮೂಲಭೂತ ಆವಶ್ಯಕತೆ ಎಂದೇ ಪರಿಗಣಿತವಾಗಿದೆ. ಗಾಳಿ, ನೀರು, ಆಹಾರ ಎಂಬಿವು ಮಾನವನಿಗೆ ಎಷ್ಟು ಮುಖ್ಯವೋ ‘ತಲೆಯ ಮೇಲೆ ಒಂದು ಸೂರು’ ಎಂಬುದೂ ಅಷ್ಟೇ ಮುಖ್ಯ. ಆದ್ದರಿಂದ, ನಾಗರಿಕತೆಯ ಒಂದು ಮುಖ್ಯ ಲಕ್ಷಣವೇ ಮನೆ, ನಿವಾಸ, ಕಟ್ಟಡಗಳು. ಇಂದು ಆಧುನಿಕ ಜೀವನದಲ್ಲಿ ನಾವು ಹತ್ತುಹಲವು ಬಗೆಯ